ಶಿವಪ್ರಕಾಶರ ಕಾವ್ಯ ಸತತವಾಗಿ ರಕ್ಷಕ ಶಕ್ತಿಗಳನ್ನು ಹುಡುಕುತ್ತಿದೆ. ಇವರ ಕಾವ್ಯ ಮೂರು ಆಶ್ರಯ ತಾಣಗಳನ್ನು ಹುಡುಕುತ್ತಾ ಅವುಗಳ ಬಗೆಗಿನ ನಂಬಿಕೆಯನ್ನು ಗಟ್ಟಿ ಮಾಡಿಕೊಳ್ಳಲು ನಿರಂತರವಾಗಿ ಯತ್ನಿಸುತ್ತಲೇ ಇದೆ. ನಂಬಿಕೆ ಅಪನಂಬಿಕೆಗಳ ನಡುವೆ, ಆಸೆ ನಿರಾಸೆಗಳ ನಡುವೆ, ಆತಂಕ ಸಂಭ್ರಮಗಳ ನಡುವೆ ಜೀಕುತ್ತಲೇ ಇದೆ.

.....
ಇಳೆಗಿಳಿಯೆ
ಇಳಿ
ಇಳೆಗೆ
ನಾರುತಿವೆ ಎಲ್ಲೆಲ್ಲು ಮಡಿದ ನನ್ನ ಪೂರ್ವಜರ ಶವರಾಶಿ
.....
ಇಲ್ಲಿ ಶಾಂತಿಗೆ ಬದಲು
ಬರೀ ಕದನ ವಿರಾಮ

ಇಳಿ
ಈ
ಇಳೆಗೆ
ಇನ್ನೂ ತಳಗೆ
.....
ಇಳಿದು ಗಂಗೆ ಈಗಾಗಲೇ ತೊಳೆಯತೊಡಗಿದ್ದಾಳೆ
ಇಳೆಯನ್ನು ಇಡೀ ಪಾತಾಳವನ್ನು
ಹೊರಗು ಒಳಗುಗಳನ್ನು
ಗಂಗೆ ಇಳಿದಿದ್ದಾಳೆ
ನನ್ನೊಳಗೆ
ನಿನ್ನೊಳಗೆ
ಮಣ್ಣೊಳಗೆ
(ಭಗೀರಥ ಪ್ರಾರ್ಥನೆ– 'ಮಾತು ಮಂತ್ರವಾಗುವವರೆಗೆ' ಸಂಕಲನ)

ತಾಯಿಯನ್ನು ನಂಬಿ ಕೆಟ್ಟವರು ಯಾರು? ಮನುಕುಲದ ಇತಿಹಾಸದಲ್ಲಿ ದ್ರೋಹ ಬಗೆಯದ ಸಂಬಂಧವಿದ್ದರೆ ಅದು ತಾಯಿ ಮಗುವಿನದು ಮಾತ್ರ ತಾನೇ. ತಾಯಿ ಪ್ರಜ್ಞೆಯಿಂದಲೇ ಶಿವಪ್ರಕಾಶರ ಕಾವ್ಯದ ಇನ್ನೆಲ್ಲ ರೆಂಬೆಕೊಂಬೆಗಳೂ ಹರಡುತ್ತವೆ.